




# ತೋರು ಬೆರಳಿನ ತಾಕತ್ತು

ಮಲೇಷ್ಯಾದ ಕುಂಗ್ ಫು ಮಾಸ್ಟರ್ ಆಗಿರುವ ಹೋ ಯಿಂಗ್ ಹುಯ್ ಗೆ ಎಳನೀರನ್ನು ಒಡೆಯಲು ಯಾವುದೇ ಕತ್ತಿ ಬೇಕಿಲ್ಲ. ಪ್ರಕೃತಿಯೇ ಬಲಿಷ್ಠ ತೋರು ಬೆರಳನ್ನು ಈತನಿಗೆ ಕೊಡುಗೆಯಾಗಿ ನೀಡಿದೆ. ಅಸಾಮಾನ್ಯ ಶಕ್ತಿಯುಳ್ಳ ಈತನ ತೋರು ಬೆರಳು, ತೆಂಗಿನ ಕಾಯಿಯ ಚಿಪ್ಪನ್ನು ಒಡೆಯಬಲ್ಲದು; ಎಳನೀರನ್ನು ಒಡೆದು ನೀರನ್ನು ಹೊರತರಬಲ್ಲದು.

ಮಲೇಷ್ಯಾದ ಮಲಕ್ಕಾ ರಾಜ್ಯದಲ್ಲಿರುವ ಜೋಂಕರ್ ರಸ್ತೆ ಬದಿಯಲ್ಲಿ ಹೋ ಯಿಂಗ್ ಎಳನೀರ ಕಾಯಿಯನ್ನು ಬೆರಳಿನಿಂದ ಚುಚ್ಚಿ ನೀರನ್ನು ಹೊರಬರಿಸುವ ಸಾಹಸ ಕಾರ್ಯವನ್ನು ವಾರಕ್ಕೆರಡು ಸಲ ಮಾಡುತ್ತಿದ್ದ. ಇದನ್ನು ಮಲೇಷ್ಯಾ ಸರ್ಕಾರ ಗುರುತಿಸಿ ಈ ಸ್ಥಳಕ್ಕೆ ಬರುವ ಸ್ಥಳೀಯರನ್ನು ಹಾಗೂ ಯಾತ್ರಿಕರನ್ನು ರಂಜಿಸಲು ಈತನನ್ನು 2000 ರಲ್ಲಿ ಅವಕಾಶ ನೀಡಿತು. ಪ್ರತೀ ಶುಕ್ರವಾರ ಹಾಗೂ ಶನಿವಾರ ಜೋಹರ್ ಬರು ನಗರದಲ್ಲಿರುವ ಮನೆಯಿಂದ ಈ ಜಾಗಕ್ಕೆ ಬಂದು ತನ್ನ ವಿಶಿಷ್ಟ ಕೌಶಲ್ಯವನ್ನು ಎಲ್ಲರೆದುರು ಪ್ರದರ್ಶನ ಮಾಡಲಾರಂಭಿಸಿದ. ಇದಕ್ಕೂ ಮುನ್ನ 1991ಹಾಗೂ 1995 ನೇ ಇಸವಿಯ ನಡುವೆ ಈತ ತನ್ನ ತೋರು ಬೆರಳಿನ ತಾಕತ್ತನ್ನು ಸಿಂಗಾಪುರದ ಬುಜಿಸ್ ರಸ್ತೆಯಲ್ಲಿ ತೋರಿಸುತ್ತಿದ್ದನಂತೆ.

ಒಂದು ವರ್ಷದೊಳಗೆ ಈತ ಇದರಲ್ಲೇ ದಾಖಲೆ ನಿರ್ಮಿಸಿದ. 2001ರ ಫೆಬ್ರುವರಿ 2 ರಂದು, ಒಂದು ನಿಮಿಷ ಹತ್ತು ಸೆಕೆಂಡ್‌ಗಳ ಅವಧಿಯಲ್ಲಿ ಮೂರು ಎಳನೀರ ಕಾಯಿಗಳನ್ನು ಬೆರಳಿನಿಂದ ಚುಚ್ಚಿ ತೂತು ಮಾಡಿ ಮಲೇಷ್ಯಾ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ದಾಖಲೆ ಮಾಡಿದ.

ಬಹಳ ಕಷ್ಟಕರವಾದ ಈ ಕಲೆಯನ್ನು ಸಿದ್ಧಿಸಿಕೊಳ್ಳುವ ಸಲುವಾಗಿ ಮೊದಲು ಈತ ಬಾಳೆ ಗಿಡಗಳನ್ನು ಬೆರಳಿನಿಂದ ಚುಚ್ಚುತ್ತಿದ್ದನಂತೆ. ಆಗ ಊರಿನ ಜನರೆಲ್ಲಾ ಈತನನ್ನು ಹುಚ್ಚನೆಂದು ಆಡಿಕೊಳ್ಳುತ್ತಿದ್ದರಂತೆ. ಆದರೂ ಈತ ಕಿವಿಗೊಡಲಿಲ್ಲ. ಬೆರಳಿಗೆ ಬಹಳಷ್ಟು ನೋವಾದರೂ ಸಹಿಸಿಕೊಂಡು, ಎರಡು ವರ್ಷಗಳ ಕಠಿಣ ಪರಿಶ್ರಮದಿಂದ ಎಳನೀರನ್ನು ಬೆರಳಿನಿಂದ ಚುಚ್ಚಿ ರಂಧ್ರ ಮಾಡುವ ಕಲೆಯನ್ನು ಕರಗತ ಮಾಡಿಕೊಂಡನಂತೆ.

ಕೇವಲ ಬೆರಳಿಂದ ಎಳನೀರನ್ನು ರಂಧ್ರ ಮಾಡುವುದು ಸುಲಭದ ಕೆಲಸವೇನಲ್ಲ. ಎರಡು ಬಾರಿ ಬೆರಳನ್ನು ಮುರಿದು ಕೊಂಡಿದ್ದರೂ ಸಹ ಛಲ ಬಿಡದ ಹೋ ಯಿಂಗ್ 10 ಸೆಕೆಂಡ್‌ಗಳ ಅವಧಿಯಲ್ಲಿ ನಾಲ್ಕು ಎಳನೀರುಗಳನ್ನು ರಂಧ್ರ ಮಾಡಿ ತನ್ನದೇ ದಾಖಲೆಯನ್ನು ಮುರಿದು ಹೊಸ ದಾಖಲೆಯನ್ನು ನಿರ್ಮಿಸುವ ತವಕದಲ್ಲಿದ್ದಾನೆ.

■ ವಿನಯಕುಮಾರ್ ಬಿ.ಎಚ್.

